# ನಡಾವಳಿ ಮತ್ತು ನೈತಿಕತೆ ನೀತಿ
# ಪ್ರತೀಕಾರ ವಿರೋಧಿ ನೀತಿ

ETHICS & LEGAL COMPLIANCE | ISSUED: June 1, 2014 – REVISED: June 16, 2021

ಪ್ರತೀಕಾರದ ಭಯವಿಲ್ಲದೆ ಕಾನೂನು ಮತ್ತು ನೈತಿಕ ಕಳಕಳಿಗಳನ್ನು ಎತ್ತಲು ಅವಕಾಶ ನೀಡುವ ಸಂಸ್ಕೃತಿಯನ್ನು ಬೆಂಬಲಿಸಲು ಮ್ಯಾಗ್ನ ಬದ್ಧವಾಗಿದೆ. ಮ್ಯಾಗ್ನ ತನ್ನ ಉದ್ಯೋಗಿ ಮತ್ತು ಇತರ ಪಾಲುದಾರರಿಗೆ ಅಂತಹ ಕಳಕಳಿಗಳನ್ನು ವರದಿ ಮಾಡಲು ಬಹುದಾರಿಗಳನ್ನು ಒದಗಿಸುತ್ತದೆ ಹಾಗೂ ಪ್ರಾಮಾಣಿಕವಾಗಿ ಮತ್ತು ಒಳ್ಳೆಯ ಉದ್ದೇಶದಿಂದ ಅಂತಹ ಕಳಕಳಿಯನ್ನು ಎತ್ತುವ ಉದ್ಯೋಗಿ ಮತ್ತು ಇತರ ಪಾಲುದಾರರ ಮೇಲೆ ಪ್ರತೀಕಾರವನ್ನು ನಿಷೇಧಿಸುತ್ತದೆ.

ಈ ನೀತಿ Magna International Inc. ಮತ್ತು ಅದರ ಎಲ್ಲಾ ಕಾರ್ಯಾಚರಣಾ ಗುಂಪು, ವಿಭಾಗ, ಜಂಟಿ ಉದ್ದಿಮೆಗಳಿಗೆ ಮತ್ತು ಜಾಗತಿಕವಾದ ಇತರ ಕಾರ್ಯಾಚರಣೆಗಳಿಗೆ (ಒಟ್ಟಾರೆಯಾಗಿ "Magna"ಗೆ) ಅನ್ವಯಿಸುತ್ತದೆ. ಈ ನೀತಿಯು ಉದ್ಯೋಗಿ, ಅಧಿಕಾರಿ, ನಿರ್ದೇಶಕ, ಸಲಹೆಗಾರ ಮತ್ತು ಏಜೆಂಟರು ಸೇರಿದಂತೆ ಮ್ಯಾಗ್ನ ಪರವಾಗಿ ಕಾರ್ಯನಿರ್ವಹಿಸುವ ಎಲ್ಲ ವ್ಯಕ್ತಿಗಳಿಗೂ ಅನ್ವಯ ಆಗುತ್ತದೆ.

## ಪರಿಚಯ

ಕಾನೂನಿಗೆ ಮತ್ತು ನೈತಿಕತೆಗೆ ಸಂಬಂಧಪಟ್ಟ ಕಳಕಳಿಗಳನ್ನು ಸಾಧ್ಯವಾದಷ್ಟು ಬೇಗ ಗುರುತಿಸಿ, ಪರಿಹರಿಸುವುದು ಮುಖ್ಯವಾಗಿದೆ. ಅದೇ ಕಾರಣಕ್ಕೆ, ನಮ್ಮ ಉದ್ಯೋಗಿಗಳು ಮತ್ತು ಇತರ ಪಾಲುದಾರರು ಪ್ರತೀಕಾರದ ಭಯವಿಲ್ಲದೆ (ಇದರಲ್ಲಿ ದಂಡನೆಗೆ ಒಳಪಡಿಸುವುದು, ಬಿಡುಗಡೆಗೊಳಿಸುವುದು, ಕೆಳಗಿನ ಸ್ಥಾನಕ್ಕೆ ಇಳಿಸುವುದು, ಅಮಾನತುಗೊಳಿಸುವುದು, ಬೆದರಿಕೆ ಹಾಕುವುದು ಅಥವಾ ಕಿರುಕುಳ ನೀಡುವುದು ಕೂಡ ಒಳಗೊಂಡಿದೆ) ಕಾನೂನು ಮತ್ತು ನೈತಿಕತೆ ಕಳಕಳಿಗಳನ್ನು ವರದಿ ಮಾಡುವಂತ ಕೆಲಸದ ವಾತಾವರಣವನ್ನು ಮ್ಯಾಗ್ನ ಬೆಂಬಲಿಸುತ್ತದೆ.  ಕಾನೂನು ಮತ್ತು ನೈತಿಕತೆ ಕಳಕಳಿಗಳನ್ನು ಪ್ರಾಮಾಣಿಕವಾಗಿ ಮತ್ತು ಒಳ್ಳೆಯ ಉದ್ದೇಶದಿಂದ ವರದಿ ಮಾಡುವವರ ವಿರುದ್ಧ ಪ್ರತೀಕಾರವನ್ನು ಮ್ಯಾಗ್ನ ಸಹಿಸುವುದಿಲ್ಲ.

## ಮಾನದಂಡಗಳು

ಮ್ಯಾಗ್ನ ತನ್ನ ಉದ್ಯೋಗಿಗಳು ಮತ್ತು ಇತರ ಪಾಲುದಾರರಿಗೆ ಕಾನೂನು ಮತ್ತು ನೈತಿಕತೆ ಸಮಸ್ಯೆಗಳ ಬಗ್ಗೆ ಯಾವುದೇ ಕಳಕಳಿಗಳನ್ನು ವರದಿ ಮಾಡಲು ಪ್ರೋತ್ಸಾಹಿಸುತ್ತದೆ. ಆ ರೀತಿ ಸಮಸ್ಯೆಗಳ ತ್ವರಿತ ಗುರುತಿಸುವಿಕೆ ಮ್ಯಾಗ್ನಗೆ ಅವುಗಳನ್ನು ಸುಗಮವಾಗಿ ಎದುರಿಸಲು ಉತ್ತಮ ಅವಕಾಶವನ್ನು ನೀಡುತ್ತದಲ್ಲದೆ, ಅವುಗಳು ಇನ್ನು ಗಂಭೀರವಾಗಿರುವಂತೆಯೆ ಬೇಕಾದ ಎಲ್ಲಾ ಮಾಹಿತಿಗಳನ್ನು ತಿಳಿಸುತ್ತದೆ ಹಾಗೂ ಕಳಕಳಿಗಳನ್ನು ಪರಿಹರಿಸುವ ಮತ್ತು ತಗ್ಗಿಸುವ ಮೂಲಕ ಯಾವುದೇ ಮುಂಬರಬಹುದಾದ ಪರಿಣಾಮವನ್ನು ಕಡಿಮೆ ಮಾಡುತ್ತದೆ.

ಪ್ರಾಮಾಣಿಕವಾಗಿ ಮತ್ತು ಒಳ್ಳೆಯ ಉದ್ದೇಶದಿಂದ ಕಾನೂನು ಅಥವಾ ನೈತಿಕತೆ ಕಳಕಳಿಯನ್ನು ಎತ್ತುವ ಯಾರ ವಿರುದ್ಧವೂ ಪ್ರತೀಕಾರವನ್ನು ಮ್ಯಾಗ್ನ ಸಹಿಸುವುದಿಲ್ಲ. ಅಂತಹ ಕಳಕಳಿಗಳನ್ನು ಎತ್ತುವುದರಿಂದ ಯಾರನ್ನೂ ಬೆಂಬಲಿಸದ ಅಥವಾ ತಡೆಯುವ ಪ್ರಯತ್ನ ಮಾಡುವ ಅಥವಾ ಅಂತಹ ಕಳಕಳಿಯನ್ನು ಎತ್ತುವ ವ್ಯಕ್ತಿಯ ವಿರುದ್ಧದ ಪ್ರತೀಕಾರದ ಯಾವುದೇ ಕ್ರಮವನ್ನು ಸಹಿಸಲಾಗುವುದಿಲ್ಲ ಹಾಗೂ ಅದನ್ನು ಗಂಭೀರ ವಿಷಯವೆಂದು ಪರಿಗಣಿಸಲಾಗುವುದು ಮತ್ತು ಉದ್ಯೋಗದಿಂದ ವಜಾಗೊಳಿಸುವುದು ಸೇರಿದಂತೆ ಶಿಸ್ತಿನ ಕ್ರಮವನ್ನು ತೆಗೆದುಕೊಳ್ಳಲಾಗುತ್ತದೆ.

ಮ್ಯಾಗ್ನ ಹಾಟ್‌ಲೈನ್ ಮೂಲಕ ಹೆಸರು ಮರೆಮಾಚಿ ಮಾಡಿದ ವರದಿ, ಮೇಲ್ವಿಚಾರಕ ಅಥವಾ ವ್ಯವಸ್ಥಾಪಕರು ಅಥವಾ ಮಾನವ ಸಂಪನ್ಮೂಲ ಇಲಾಖೆಯ ಸದಸ್ಯರಿಗೆ, ಕಾನೂನು ಸಲಹೆಗಾರರಿಗೆ, ನೈತಿಕತೆ & ಕಾನೂನು ಅನುಸರಣೆ ಇಲಾಖೆಗೆ, ಆಂತರಿಕ ಲೆಕ್ಕಪರಿಶೋಧನೆ ಅಥವಾ ಇತರ ಸೂಕ್ತ ವಿಧಾನಗಳು ("ವರದಿ ಮಾಡುವ ದಾರಿಗಳು") ಒಳಗೊಂಡಂತೆ ಮಾಡಿದ ಎಲ್ಲಾ ಕಾನೂನು ಮತ್ತು ನೈತಿಕತೆ ಕಳಕಳಿಗಳಿಗೆ ಅಥವಾ ವರದಿಗಳಿಗೆ ಈ ನೀತಿ ಅನ್ವಯವಾಗುತ್ತದೆ.

## ಪ್ರತೀಕಾರದ ಉದಾಹರಣೆಗಳು

ಪ್ರತೀಕಾರವು ಹಲವು ರೂಪಗಳನ್ನು ತೆಗೆದುಕೊಳ್ಳಬಹುದು ಮತ್ತು ಅದು ಸೂಕ್ಷ್ಮ ಕ್ರಮಗಳನ್ನೂ ಒಳಗೊಂಡಿರಬಹುದು, ಕೆಳಗೆ ಪಟ್ಟಿ ಮಾಡಿರುವ ಯಾವುದೇ ಉದಾಹರಣೆಗಳನ್ನು ಒಳಗೊಂಡಂತೆ, ಶಂಕಿತ ಪ್ರತೀಕಾರದ ನಿದರ್ಶನಗಳನ್ನು ವರದಿ (ಕೆಳಗಿನ "ವರದಿ ಮಾಡುವ ಕಳಕಳಿಗಳು" ವಿಭಾಗವನ್ನು ನೋಡಿ) ಮಾಡಬೇಕು. ಪ್ರತೀಕಾರದ ಉದಾಹರಣೆಗಳು ಕೆಳಗಿನವುಗಳನ್ನು ಒಳಗೊಂಡಿರಬಹುದು:

- ಕೆಲಸಗಳ ಅಥವಾ ಕೆಲಸಗಳ ಅವಧಿಯ ಕಡಿತ, ಸೇರಿಕೆ ಅಥವಾ ಬದಲಾವಣೆ
- ಉದ್ಯೋಗಿಗೆ ಮುಜುಗರ ಅಥವಾ ಅವಮಾನ ಮಾಡುವ ಉದ್ದೇಶದಿಂದ ಮಾಡಿದ ನಿಂದನೆ ಅಥವಾ ತೋರಿದ ನಡವಳಿಕೆ
- ದೈಹಿಕ ಹಲ್ಲೆ ಅಥವಾ ಬೆದರಿಸುವಿಕೆ
- ವಜಾಗೊಳಿಸುವಿಕೆ, ಕೆಳಗಿನ ಸ್ಥಾನಕ್ಕೆ ಇಳಿಸುವಿಕೆ, ಅಥವಾ ವಜಾ ಮಾಡುವುದಾಗಿ ಅಥವಾ ಕೆಳಗಿನ ಸ್ಥಾನಕ್ಕೆ ಇಳಿಸುವುದಾಗಿ ಮಾಡಿದ ಬೆದರಿಕೆ
- ಬಡ್ತಿಯ, ವೇತನ ಹೆಚ್ಚಳದ, ನಿಯೋಜನೆಯ, ವರ್ಗಾವಣೆಯ ಅಥವಾ ಅಧಿಕಾವಧಿ ಕೆಲಸ ಮಾಡುವ ಅವಕಾಶಗಳ ನಿರಾಕರಣೆ
- ಮ್ಯಾಗ್ನ ಉದ್ಯೋಗಿ ಚಾರ್ಟರ್ ಅಥವಾ ಮ್ಯಾಗ್ನ ಕಾರ್ಯಾಚರಣೆಯ ತತ್ವಗಳ ಅನುಸಾರ ಇಲ್ಲದ ಇತರ ಕ್ರಿಯೆಗಳು

## ಸಿಬ್ಬಂದಿ ನಿರ್ಧಾರಗಳು ಮತ್ತು ಸಹಕಾರ

ಈ ನೀತಿಯಲ್ಲಿರುವ ಯಾವುದನ್ನೂ ಸಹ, ಪ್ರತೀಕಾರವಲ್ಲದ ಕಾನೂನುಬದ್ಧ ವ್ಯಾಪಾರ ಕಾರಣಗಳ ಆಧಾರದಲ್ಲಿ (ಉದಾಹರಣೆಗೆ, ಒಪ್ಪಂದದ ಉಲ್ಲಂಘನೆಯ ಆಧಾರದಲ್ಲಿ ಮಾಡಲಾದ ಸಿಬ್ಬಂದಿ ನಿರ್ಧಾರ) ಸಿಬ್ಬಂದಿ ನಿರ್ಧಾರಗಳನ್ನು ತೆಗೆದುಕೊಳ್ಳಲು ಮ್ಯಾಗ್ನ ಅನ್ನು ತಡೆಯುತ್ತದೆ ಎಂದು ಅರ್ಥೈಸಬಾರದು.

ಕಾನೂನು ಮತ್ತು ನೈತಿಕತೆ ಸಮಸ್ಯೆಗಳು ಮತ್ತು ತನಿಖೆಗಳು ಬಹಳಷ್ಟು ಅಂಶಗಳೊಂದಿಗೆ ಸಂಕೀರ್ಣವಾಗಿರುತ್ತವೆ. ಇಂತಹ ಸಮಸ್ಯೆ ಮತ್ತು ತನಿಖೆಗಳಿಗೆ ಸಂಬಂಧಪಟ್ಟಂತೆ ಸಂಪರ್ಕಿಸಿದಾಗ, ಎಲ್ಲಾ ಉದ್ಯೋಗಿಗಳು ಮತ್ತು ಇತರ ಪಾಲುದಾರರು ಸಂಪೂರ್ಣವಾಗಿ ಸಹಕರಿಸುವುದು ಮುಖ್ಯವಾಗಿದೆ. ಇದರಿಂದ ಮ್ಯಾಗ್ನ ಈ ವಿಷಯಗಳಿಗೆ ತ್ವರಿತವಾಗಿ ಮತ್ತು ಸೂಕ್ತವಾಗಿ ಪ್ರತಿಕ್ರಿಯೆ ನೀಡಲು ಅಗತ್ಯವಿರುವ ಮಾಹಿತಿಯನ್ನು ಪಡೆಯಬಹುದು.

## ಕಳಕಳಿಗಳನ್ನು ವರದಿ ಮಾಡುವುದು

ಪ್ರತೀಕಾರ ಅಥವಾ ಇತರ ಕಾನೂನು ಅಥವಾ ನೈತಿಕತೆ ಕಳಕಳಿಗಳನ್ನು ಯಾವುದಾದರು ಒಂದು ವರದಿ ಮಾಡುವ ದಾರಿಯಲ್ಲಿ ವರದಿ ಮಾಡಬಹುದು ಮತ್ತು ಅವುಗಳನ್ನು ಸಮಯೋಚಿತವಾಗಿ ಪರಿಶೀಲಿಸಲಾಗುತ್ತದೆ.

ಮ್ಯಾಗ್ನದಲ್ಲಿ, ನಾವು ನಮ್ಮ ಮ್ಯಾನೇಜರ್ ಮತ್ತು ಮೇಲ್ವಿಚಾರಕರು ಓಪನ್ ಡೋರ್ ಪ್ರೊಸೆಸ್ ನಿರ್ವಹಣೆ ಮಾಡುವುದನ್ನು ಬಯಸುತ್ತೇವೆ. ಮ್ಯಾಗ್ನದ ಮೇಲ್ವಿಚಾರಕ ಮತ್ತು ಮ್ಯಾನೇಜರ್‌ಗಳು ಸುಲಭವಾಗಿ ಸಂಪರ್ಕಕ್ಕೆ ಸಿಗಬೇಕು, ಕಾನೂನು ಮತ್ತು ನೈತಿಕ ಕಳಕಳಿಗಳನ್ನು ಗಂಭೀರವಾಗಿ ಪರಿಗಣಿಸಬೇಕು. ಜೊತೆಗೆ ಕಾನೂನು, ನೈತಿಕತೆ ಮತ್ತು ಕಾನೂನು ಅನುಸರಣೆ, ಮಾನವ ಸಂಪನ್ಮೂಲ ಅಥವಾ ಆಂತರಿಕ ಲೆಕ್ಕಪರಿಶೋಧನೆ, ಹೀಗೆ ಅನ್ವಯವಾಗುವ ಕಡೆ ಅಂತಹ ಕಳಕಳಿಗಳನ್ನು ವಹಿಸಿ, ಅವುಗಳನ್ನು ನಿರ್ವಹಣೆ ಮಾಡುವ ಪ್ರಕ್ರಿಯೆಯ ಬಗ್ಗೆ ತಿಳಿದುಕೊಂಡವರಾಗಿರಬೇಕು. ಮ್ಯಾಗ್ನ ಉದ್ಯೋಗಿಗಳು ಮತ್ತು ಇತರ ಪಾಲುದಾರರು ತಮ್ಮ ಕಳಕಳಿಗಳನ್ನು ಪರಿಹರಿಸಲಾಗುವುದು ಎಂದು ಅರ್ಥಮಾಡಿಕೊಳ್ಳುವುದು ಮುಖ್ಯವಾಗಿದೆ. ಅಂತಹ ಕಳಕಳಿಗಳನ್ನು ಎತ್ತುವುದು, ಪರಿಶೀಲಿಸುವುದು ಮತ್ತು ತ್ವರಿತವಾಗಿ ನಿಭಾಯಿಸಲು ಉಲ್ಲೇಖ ಮಾಡುವುದು ಕೂಡ ಮುಖ್ಯವಾಗಿದೆ. ಕಳಕಳಿಯನ್ನು ಎತ್ತಿದ ನಂತರ, ಸುಗಮವಾಗಿ ಅದನ್ನು ಎದುರಿಸುವ ಮತ್ತು ವಿಷಯವನ್ನು ತ್ವರಿತವಾಗಿ ಪರಿಹರಿಸುವ ಅವಕಾಶ ಬೇಗನೆ ಹೊರಟುಹೋಗಬಹುದು.

ಉದ್ಯೋಗಿಗಳು ಮತ್ತು ಇತರ ಪಾಲುದಾರರು ಸಹ ಮ್ಯಾಗ್ನ ವರದಿ ಮಾಡುವ ವ್ಯವಸ್ಥೆಯನ್ನು ಗೌರವಿಸಬೇಕು ಮತ್ತು ಯಾವುದೇ ಕಾರಣಕ್ಕೂ ಅದನ್ನು ದುರುಪಯೋಗ ಮಾಡಬಾರದು ಎಂದು ತಿಳಿದಿರಬೇಕು. ಅಪ್ರಾಮಾಣಿಕವಾಗಿ ಅಥವಾ ಉಚಿತವಲ್ಲದ ಉದ್ದೇಶಗಳಿಂದ (ಉದಾಹರಣೆಗೆ, ಸಹೋದ್ಯೋಗಿಯನ್ನು ಶಿಕ್ಷಿಸಲು ಅಥವಾ ಅವರಿಗೆ ಕಿರುಕುಳ ನೀಡುವ ಉದ್ದೇಶದಿಂದ) ವರದಿಗಳನ್ನು ಸಲ್ಲಿಸಿದ ವ್ಯಕ್ತಿಗಳನ್ನು ಉದ್ಯೋಗದಿಂದ ವಜಾ ಮಾಡುವುದು ಸೇರಿದಂತೆ, ಅವರ ಮೇಲೆ ಶಿಸ್ತು ಕ್ರಮವನ್ನು ಜರುಗಿಸಲಾಗುತ್ತದೆ.

## ಹೆಚ್ಚಿನ ಮಾಹಿತಿಗಾಗಿ:

ಹೆಚ್ಚಿನ ಮಾಹಿತಿಗಾಗಿ ಅಥವಾ ಸಲಹೆಗಾಗಿ, ದಯವಿಟ್ಟು ನಿಮ್ಮ ಗುಂಪು ಅಥವಾ ಪ್ರಾದೇಶಿಕ ಕಾನೂನು ಸಲಹೆಗಾರ, ಪ್ರಾದೇಶಿಕ ಅನುಸರಣೆ ಅಧಿಕಾರಿ ಅಥವಾ Magnaದ ನೈತಿಕತೆ ಉಪಾಧ್ಯಕ್ಷರು ಮತ್ತು ಮುಖ್ಯ ಅನುಸರಣೆ ಅಧಿಕಾರಿಗಳನ್ನು ಸಂಪರ್ಕಿಸಿ.

---

| | |
|---|---|
| Issued: | June 1, 2014 |
| Revised: | June 16, 2021 |
| Next Review: | Q2 2024 |
| Issued By: | Ethics & Legal Compliance |
| Approved By: | Magna Compliance Council |